# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 584 (529) |
| ಪ್ರಶ್ನೆ ಕೇಳಿರುವ ಸದಸ್ಯರು | ಮಾನ್ಯ ಶ್ರೀ ಮುನಿರಾಜು ಗೌಡ ಪಿ.ಎಂ. (ವಿಧಾನಸಭೆಯಿಂದ ಚುನಾಯಿತರಾದವರು) ವಿಧಾನ ಪರಿಷತ್ತಿನ ಸದಸ್ಯರು |
| ಉತ್ತರ ನೀಡುವ ಸಚಿವರು | ಮಾನ್ಯ ಕೃಷಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 17-12-2021 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2018-19, 2019-20 ಮತ್ತು 2020-21ನೇ ಸಾಲಿನಲ್ಲಿ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ ಎಷ್ಟು ಜನ ರೈತರು ಕೇಂದ್ರ ಸರ್ಕಾರದ ಫಸಲ್ ಭೀಮಾ ಯೋಜನೆಯಡಿಯಲ್ಲಿ ನೋಂದಾಯಿಸಿಕೊಂಡಿದ್ದಾರೆ; ಎಷ್ಟು ಜನ ರೈತರು ವಿಮಾ ಕಂತು ತುಂಬಿದ್ದಾರೆ; ವರ್ಷವಾರು, ತಾಲ್ಲೂಕುವಾರು ವಿವರ ನೀಡುವುದು) | ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ 2018-19, 2019-20 ಮತ್ತು 2020-21 ನೇ ಸಾಲಿನಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಕ್ರಮವಾಗಿ ಒಟ್ಟು 733, 1113 ಹಾಗೂ 199 ರೈತರು ವಿಮಾ ಕಂತು ಪಾವತಿಸಿ ನೋಂದಾಯಿಸಿಕೊಂಡಿದ್ದು, ತಾಲ್ಲೂಕುವಾರು ವಿವರಗಳು ಈ ಕೆಳಗಿನಂತಿದೆ. |

| ಕ್ರ. ಸಂ. | ತಾಲ್ಲೂಕು | 2018-19 | 2019-20 | 2020-21 |
|---|---|---|---|---|
| 1 | ಆನೇಕಲ್ | 308 | 906 | 127 |
| 2 | ಬೆಂಗಳೂರು ಉತ್ತರ | 13 | 5 | 1 |
| 3 | ಬೆಂಗಳೂರು ದಕ್ಷಿಣ | 221 | 147 | 48 |
| 4 | ಬೆಂಗಳೂರು ಪೂರ್ವ | 92 | 31 | 10 |
| 5 | ಯಲಹಂಕ | 99 | 24 | 13 |
| | ಒಟ್ಟು | **733** | **1113** | **199** |

<table>
<tr>
<td>ಆ)</td>
<td>ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ನಗರ ಜಿಲ್ಲೆಯ ಎಷ್ಟು ರೈತರಿಗೆ ವಿಮೆ ಮರುಪಾವತಿ ಮಾಡಲಾಗಿದೆ; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)</td>
<td>ಬೆಂಗಳೂರು ನಗರ ಜಿಲ್ಲೆಯಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ 2018-19, 2019-20 ಮತ್ತು 2020-21 ನೇ ಸಾಲಿನಲ್ಲಿ ಕ್ರಮವಾಗಿ ಒಟ್ಟು 442, 123 ಹಾಗೂ 11 ಮಂದಿ ರೈತರಿಗೆ ಬೆಳೆ ವಿಮೆ ಮರುಪಾವತಿ ಮಾಡಲಾಗಿದ್ದು. ತಾಲ್ಲೂಕುವಾರು ವಿವರಗಳು ಈ ಕೆಳಗಿನಂತಿದೆ.
<table>
<tr><th rowspan="2">ಕ್ರ.ಸಂ.</th><th rowspan="2">ತಾಲ್ಲೂಕು</th><th colspan="3">ಬೆಳೆ ವಿಮೆ ಮರುಪಾವತಿ ಮಾಡಿದ ರೈತರ ಸಂಖ್ಯೆ</th></tr>
<tr><th>2018-19</th><th>2019-20</th><th>2020-21</th></tr>
<tr><td>1</td><td>ಆನೇಕಲ್</td><td>210</td><td>78</td><td>10</td></tr>
<tr><td>2</td><td>ಬೆಂಗಳೂರು ಉತ್ತರ</td><td>2</td><td>5</td><td>0</td></tr>
<tr><td>3</td><td>ಬೆಂಗಳೂರು ದಕ್ಷಿಣ</td><td>115</td><td>12</td><td>1</td></tr>
<tr><td>4</td><td>ಬೆಂಗಳೂರು ಪೂರ್ವ</td><td>63</td><td>13</td><td>0</td></tr>
<tr><td>5</td><td>ಯಲಹಂಕ</td><td>52</td><td>15</td><td>0</td></tr>
<tr><td colspan="2">ಒಟ್ಟು</td><td>442</td><td>123</td><td>11</td></tr>
</table>
</td>
</tr>
<tr>
<td>ಇ)</td>
<td>ರೈತರು ಸದರಿ ಯೋಜನೆಯಡಿ ವಿಮಾ ಯೋಜನೆಯ ಹಣ ಪಡೆಯಲು ಕಷ್ಟ ಪಡುತ್ತಿರುವುದಕ್ಕೆ ಕಾರಣಗಳೇನು;</td>
<td>ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ರೈತರ ನೋಂದಾವಣೆಯಿಂದ ಬೆಳೆ ವಿಮೆ ಪರಿಹಾರ ಪಾವತಿಸುವವರೆಗೂ ಎಲ್ಲಾ ಪ್ರಕ್ರಿಯೆಗಳನ್ನು ಸಂರಕ್ಷಣೆ ತಂತ್ರಾಂಶದ ಮೂಲಕ ಅನುಷ್ಠಾನಗೊಳಿಸುತ್ತಿರುವುದರಿಂದ ರೈತರು ಬೆಳೆ ವಿಮೆ ಪರಿಹಾರದ ಹಣ ಪಡೆಯುವಲ್ಲಿ ಯಾವುದೇ ತೊಂದರೆಗೆ ಅವಕಾಶವಿರುವುದಿಲ್ಲ. ಅಲ್ಲದೇ ಆಧಾರ್ ಸಂಖ್ಯೆ ರೈತರ ಬ್ಯಾಂಕ್ ಖಾತೆಗೆ ಜೋಡಣೆಯಾಗಿದ್ದಲ್ಲಿ ಬೆಳೆ ವಿಮೆ ಪರಿಹಾರದ ಮೊತ್ತವನ್ನು ನೇರವಾಗಿ ಜಮೆ ಮಾಡಲಾಗುತ್ತದೆ. ಆದಾಗ್ಯೂ ಕೆಲವು ಸಂದರ್ಭಗಳಲ್ಲಿ ಫಲಾನುಭವಿ ರೈತರ ಆಧಾರ್ ಸಂಖ್ಯೆ / ಬ್ಯಾಂಕ್ ಖಾತೆ ಸಂಖ್ಯೆ ತಪ್ಪಾಗಿ ನಮೂದಾಗಿರುವ ಸಾಧ್ಯತೆ ಇರುವುದರಿಂದ ನೀಡದೆ ಇರುವುದರಿಂದ ಅಥವಾ ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆ ಜೋಡಣೆಯಾಗದೆಯಿರುವ ಕಾರಣ ವಿಳಂಬವಾಗಿರುತ್ತದೆ. ಅಂತಹ ಪ್ರಕರಣಗಳನ್ನು ಇತ್ಯರ್ಥ ಪಡಿಸಲು ರೈತರಿಂದ ಸರಿಯಾದ ಮಾಹಿತಿ ಪಡೆದು ಬೆಳೆ ವಿಮೆ ಪರಿಹಾರವನ್ನು ವಿತರಿಸಲಾಗುತ್ತಿದೆ.</td>
</tr>
</table>

| | | |
|---|---|---|
| ಈ) | ಸದರಿ ಯೋಜನೆಗೆ ರೈತರು ಹೆಚ್ಚಿನ ಸಂಖ್ಯೆಯಲ್ಲಿ ನೋಂದಾಯಿಸುವಂತೆ ಪ್ರೋತ್ಸಾಹಿಸಲು ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳೇನು? | ಈ ಯೋಜನೆಯ ಕುರಿತು ರೈತರಿಗೆ ಮಾಹಿತಿ ನೀಡಿ ಪ್ರೋತ್ಸಾಹಿಸಲು ಸ್ಥಳೀಯ ಮತ್ತು ರಾಜ್ಯದ ಪ್ರಮುಖ ದಿನಪತ್ರಿಕೆಗಳಲ್ಲಿ ಹಂಗಾಮುವಾರು ಜಾಹಿರಾತು ನೀಡುವ ಮೂಲಕ, ಭಿತ್ತಿಪತ್ರಗಳು ಮತ್ತು ಕರಪತ್ರಗಳ ಮೂಲಕ ಮತ್ತು ಎಲ್ಲಾ ತಾಲ್ಲೂಕು, ಹೋಬಳಿ ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ನಡೆಸಲಾಗುವ ಕೃಷಿ ಅಭಿಯಾನ ಕಾರ್ಯಕ್ರಮದ ಮೂಲಕ, ತರಬೇತಿಗಳು, ಸಮೂಹ ಮಾಧ್ಯಮಗಳ ಮೂಲಕ, ಜನಸ್ಪಂದನ ಮತ್ತು ಗ್ರಾಮಸಭೆಗಳಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ವಿಮಾ ಸಂಸ್ಥೆಗಳಿಂದಲೂ ಸಹ ಸಮೂಹ ಮಾಧ್ಯಮಗಳ ಮೂಲಕ ಹೆಚ್ಚಿನ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜಾಗೃತಿ ಮೂಡಿಸಲಾಗುತ್ತಿದೆ.<br>ದೂರದರ್ಶನ ಮತ್ತು ಆಕಾಶವಾಣಿ ಮೂಲಕ ರಾಜ್ಯ, ಜಿಲ್ಲಾ ಮಟ್ಟಗಳಲ್ಲಿಯೂ ಸಹ ಪ್ರತಿ ಹಂಗಾಮಿನ ಪ್ರಾರಂಭದಲ್ಲಿ ಬೆಳೆ ವಿಮೆ ಯೋಜನೆಯ ಪರಿಚಯ ಮತ್ತು ನೋಂದಣಿ ಕುರಿತು ಮಾಹಿತಿಯನ್ನು ನೀಡಲಾಗುತ್ತಿದೆ. |

ಸಂ: AGRI/AAE/148/2021

(ಬಿ.ಸಿ. ಪಾಟೀಲ್)
ಕೃಷಿ ಸಚಿವರು